ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 976
ಸದಸ್ಯರ ಹೆಸರು : ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 21.12.2021
ಉತ್ತರಿಸುವವರು : ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಒಟ್ಟು ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ನೊಂದಣಿಯಾದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಆ)	ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವಾಗ ಪರವಾನಗಿ ಪಡೆಯಲು ಇರುವ ನಿಯಮಗಳೇನು;	ರಾಜ್ಯದಲ್ಲಿ ಸಣ್ಣ ಸಣ್ಣ ಉದ್ಯಮಗಳನ್ನು ತೆರೆಯಲು ಉದ್ಯಮಶೀಲರು ಕನಿಷ್ಟ ಈ ಕೆಳಗಿನ ಮಾರ್ಗಸೂಚಿಯನ್ನು ಅನುಸರಿಸಬೇಕಾಗುತ್ತದೆ: 1. ಮಾಲೀಕತ್ವ ಉದ್ಯಮ ಸ್ಥಾಪಿಸಲು ಬಯಸುವ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನದಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದಲ್ಲಿ "ಕಾಮನ್ ಅಪ್ಲಿಕೇಷನ್ ಫಾರಂ" ನ್ನು ಭರ್ತಿ ಮಾಡಿ ಅರ್ಜಿಯನ್ನು ಸಂಬಂಧಿಸಿದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಸಲ್ಲಿಸಬೇಕಾಗುತ್ತದೆ. 2. ಜಿಲ್ಲಾ ಕೈಗಾರಿಕಾ ಕೇಂದ್ರವು ಈ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗುವ "ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ" ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ತಾತ್ವಿಕ ಅನುಮೋದನಾ ಪತ್ರವನ್ನು ಉದ್ಯಮಶೀಲರಿಗೆ ನೀಡುತ್ತದೆ. 3. ನಂತರ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ನಿವೇಶನಕ್ಕೆ ಅರ್ಜಿ ಸಲ್ಲಿಸಿ ನಿವೇಶನವನ್ನು ಪಡೆದುಕೊಳ್ಳಬೇಕಾಗುತ್ತದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನವಾದಲ್ಲಿ ಅದಕ್ಕೆ ಸಂಬಂಧಿಸಿದ ಸಮಿತಿಯು ನಿವೇಶನವನ್ನು ಹಂಚಿಕೆ ಮಾಡುತ್ತದೆ. 4. ಉದ್ಯಮಶೀಲರು ನಿವೇಶನದ ಹಂಚಿಕೆ ಆದ ನಂತರ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಹಣಕಾಸಿನ ನೆರವಿಗಾಗಿ ಬ್ಯಾಂಕ್/ ಕೆ.ಎಸ್.ಎಫ್.ಸಿ ಗೆ ಯೋಜನಾವರದಿ ಮತ್ತು ಇತರೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಸಾಲ ಮಂಜೂರಾತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. 5. ಕೈಗಾರಿಕಾ ಕಟ್ಟಡ ನಿರ್ಮಾಣಕ್ಕಾಗಿ ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ/ಸ್ಥಳೀಯ ಪ್ರಾಧಿಕಾರಯಿಂದ ನಕ್ಷೆ ಅನುಮೋದನೆ ಪಡೆದುಕೊಂಡು ಕಟ್ಟಡ ನಿರ್ಮಾಣ ಪ್ರಾರಂಭಿಸಬೇಕಾಗುತ್ತದೆ.

		6. ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ ಎಸ್ಟಾಬ್ಲಿಷ್‌ಮೆಂಟ್" ಅನುಮತಿಯನ್ನು ಪಡೆಯಬೇಕಾಗುತ್ತದೆ. 7. ವಿದ್ಯುತ್ ಸಂಪರ್ಕಕ್ಕಾಗಿ ಸಂಬಂಧಿಸಿದ ಎಸ್ಕಾಂನಿಂದ ಮಂಜೂರಾತಿಯನ್ನು ಪಡೆಯಬೇಕಾಗುತ್ತದೆ. 8. ನೀರಿನ ಸಂಪರ್ಕಕ್ಕಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಬೇಕಾಗುತ್ತದೆ. 9. ಚಟುವಟಿಕೆ / ಯಂತ್ರೋಪಕರಣಗಳನ್ನು ಆಧರಿಸಿ "ಫ್ಯಾಕ್ಟರೀಸ್ ಮತ್ತು ಬಾಯ್ಲರ್" ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ. 10. ಕಾರ್ಮಿಕರ ಸಂಖ್ಯೆಯನ್ನು ಆಧರಿಸಿ ಕಾರ್ಮಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ. 11. ಕಾರ್ಮಿಕರ ಸಂಖ್ಯೆ 20 ಕ್ಕೂ ಹೆಚ್ಚಾದಲ್ಲಿ ಇ.ಎಸ್.ಐ/ ಪಿ.ಎಫ್/ವೃತ್ತಿ ತೆರಿಗೆ ನೊಂದಣಿ ಪಡೆಯಬೇಕಾಗುತ್ತದೆ. 12. ಉದ್ದೇಶಿತ ಕೈಗಾರಿಕೆಯ ವಾರ್ಷಿಕ ವಹಿವಾಟು ರೂ.40 ಲಕ್ಷಕ್ಕಿಂತ ಹೆಚ್ಚಾಗುವುದಿದ್ದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ "ಜಿ.ಎಸ್.ಟಿ" ನೊಂದಣಿ ಪಡೆಯಬೇಕಾಗುತ್ತದೆ. 13. ಆಹಾರ ಸಂಸ್ಕರಣಾ ಕೈಗಾರಿಕಾ ಚಟುವಟಿಕೆಯಾದಲ್ಲಿ "ಎಫ್.ಎಸ್.ಎಸ್.ಎ.ಐ" ರಹದಾರಿಯನ್ನು ಪಡೆಯಬೇಕಾಗುತ್ತದೆ. 14. ಅಪಾಯಕಾರಿ ಕೈಗಾರಿಕಾ ಚಟುವಟಿಕೆಯಾದಲ್ಲಿ "ಫೈರ್ ಸೇಫ್ಟಿ ಪ್ರಮಾಣಪತ್ರ"ವನ್ನು ಅಗ್ನಿಶಾಮಕ ಇಲಾಖೆಯಿಂದ ಪಡೆದುಕೊಳ್ಳಬೇಕಾಗುತ್ತದೆ. 15. ಕಟ್ಟಡ ನಿರ್ಮಾಣ, ಯಂತ್ರೋಪಕಣರಗಳ ಸ್ಥಾಪನೆಯಾದ ನಂತರ ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಆಪರೇಷನ್" ಅನುಮತಿಯನ್ನು ಪಡೆಯಬೇಕಾಗುತ್ತದೆ.
ಇ)	ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಹಾಗೂ ಅವುಗಳ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವ ಯಾವ ಯೋಜನೆಗಳನ್ನು ರೂಪಿಸಿದೆ; ಈ ಯೋಜನೆಗಳಿಗೆ ರಾಜ್ಯ ಸರ್ಕಾರ ಎಷ್ಟು ಅನುದಾನವನ್ನು ಮೀಸಲಿಟ್ಟಿದೆ ಹಾಗೂ ಬಿಡುಗಡೆ ಮಾಡಿದೆ; (ಸೂಕ್ತ ಮಾಹಿತಿ ನೀಡುವುದು)	ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಹಾಗೂ ಅವುಗಳ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತಂದಿರುವ ಯೋಜನೆಗಳ ವಿವರಗಳು ಈ ಕೆಳಗಿನಂತಿವೆ. 1. ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಟ ಸಾಲ ರೂ. 25 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆ ಗರಿಷ್ಟ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ. 2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ

ಶೇಕಡ 6 ರಂತೆ ಬಡ್ಡಿ ಸಹಾಯಧನ ನೀಡಲಾಗುವುದು.

3. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಶೇ 75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು (ಗರಿಷ್ಟ 2 ಎಕರೆ) ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ.

4. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಒದಗಿಸಿ ಯೋಜನಾ ವೆಚ್ಚದ ಮೇಲೆ ಶೇ 60 ರಷ್ಟು ಗರಿಷ್ಟ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.

5. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಟ ರೂ.5.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ)ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿರಹಿತ ಗರಿಷ್ಟ ರೂ.75 ಲಕ್ಷ ಸಾಫ್ಟ್‌ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ.

6. ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2020-25 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ.
   1. ಮುದ್ರಾಂಕ ಶುಲ್ಕ ವಿನಾಯಿತಿ
   2. ನೋಂದಣಿ ಶುಲ್ಕ ರಿಯಾಯಿತಿ.
   3. ಬಂಡವಾಳ ಹೂಡಿಕೆ ಸಹಾಯಧನ
   4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ
   5. ಭೂ ಪರಿವರ್ತನಾ ಶುಲ್ಕ ಮರುಪಾವತಿ.
   6. ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ.
   7. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.
   8. ವಿದ್ಯುತ್‌ತೆರಿಗೆ ವಿನಾಯಿತಿ
   9. ತಾಂತ್ರಿಕಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ
   10. ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ
   11. ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ

ಈ ಯೋಜನೆಗಳಿಗೆ 2021-22 ನೇ ಸಾಲಿನಲ್ಲಿ ಹಂಚಿಕೆಯಾಗಿರುವ ಅನುದಾನ ಮತ್ತು ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.

ಈ)	ಸಣ್ಣ ಕೈಗಾರಿಕೆಗಳಿಗೆ 2019 ರಿಂದ ಇದುವರೆಗೂ ಯಾವ ಯಾವ ಯೋಜನೆಗಳಲ್ಲಿ ಎಷ್ಟು ಸಾಲ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಸಣ್ಣ ಕೈಗಾರಿಕೆಗಳಿಗೆ 2019 ರಿಂದ ಇದುವರೆಗೂ ವಿವಿಧ **ಯೋಜನೆಗಳಡಿಯಲ್ಲಿ** ನೀಡಲಾಗಿರುವ ಸಹಾಯಧನದ ಜಿಲ್ಲಾವಾರು ವಿವರಗಳನ್ನು **ಅನುಬಂಧ-3, 4 ಮತ್ತು 5**ರಲ್ಲಿ ನೀಡಲಾಗಿದೆ.
ಉ)	ರಾಜ್ಯಕ್ಕೆ ಒಂದು ವರ್ಷದಲ್ಲಿ ಸಣ್ಣ ಕೈಗಾರಿಕೆಗಳಿಂದ ಬರುವ ಆದಾಯವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಸಣ್ಣ ಕೈಗಾರಿಕೆಗಳಿಂದ ವಿವಿಧ ಇಲಾಖೆಗಳು ಆಸ್ತಿ ತೆರಿಗೆ, ಆದಾಯ ತೆರಿಗೆ, GST, ಇತ್ಯಾದಿಗಳನ್ನು ಸಂಗ್ರಹಿಸುತ್ತದೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಯಾವುದೇ ಆದಾಯವನ್ನು ಸಂಗ್ರಹಿಸುವುದಿಲ್ಲ.
ಊ)	ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ತೊಂದರೆಗಳಾದ ಲೇಬರ್ ಚಾರ್ಜ್ ಮೇಲೆ ವಿಧಿಸುತ್ತಿರುವ ಜಿ.ಎಸ್.ಟಿ. ಸರ್ಕಾರ ಕೈಬಿಡುವುದು, ಸಣ್ಣ ಕೈಗಾರಿಕೆಗಳಿಗೆ ಅನುಮತಿ ನೀಡಲು ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ತರುವುದು, ರಾಜ್ಯ ಸರ್ಕಾರ ಕೂಡಲೇ ಸಣ್ಣ ಕೈಗಾರಿಕೆ ಕಾಯಿದೆ ಜಾರಿಗೆ ತರುವುದು; ಈ ಬೇಡಿಕೆಗಳನ್ನು ಸರ್ಕಾರ ಯಾವ ಕಾಲ ಮಿತಿಯಲ್ಲಿ ಈಡೇರಿಸಲಿದೆ? (ಸೂಕ್ತ ಮಾಹಿತಿ ನೀಡುವುದು)	ಲೇಬರ್ ಚಾರ್ಜ್ ಮೇಲೆ ವಿಧಿಸುತ್ತಿರುವ ಜಿ.ಎಸ್.ಟಿ ಬಗ್ಗೆ ಕೇಂದ್ರ ಸರ್ಕಾರವು ತೀರ್ಮಾನಿಸಬೇಕಾಗಿರುತ್ತದೆ. ಸಣ್ಣ ಕೈಗಾರಿಕೆಗಳಿಗೆ ಅನುಮೋದನೆ ನೀಡಲು ರೂ.15.00 ಕೋಟಿವರೆಗಿನ ಪ್ರಸ್ತಾವನೆಗಳಿಗೆ ಜಿಲ್ಲಾಮಟ್ಟದ ಏಕಗವಾಕ್ಷಿ ಸಮಿತಿಯು ಈಗಾಗಲೇ ಕಾರ್ಯನಿರ್ವಹಿಸುತ್ತಿದೆ.

ಸಿಐ 224 ಸಿಎಸ್‌ಸಿ 2021

(ಎನ್. ನಾಗರಾಜು (ಎಂ.ಟಿ.ಬಿ))
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

ಪ್ರಶ್ನೆ ಸಂ 821(976): ಎಂ.ನಾರಾಯಣಸ್ವಾಮಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಅನುಬಂಧ-1

Registration of MSME Units upto June 2020			UDYAM REGISTRATION from 1/7/2020 to 05/12/2021			
No.	**DISTRICT**	**UNIT in Nos.**	**Micro**	**Small**	**Medium**	**Total**
1	Bagalkot	19,009	7,169	169	13	**7,351**
2	Bellary	29,754	7,653	512	59	**8,224**
3	Belguam	87,840	23,425	567	45	**24,037**
4	Bangalore (U)	2,14,555	18,116	995	141	**19,252**
5	Bangalore (R)	63,293	1,10,166	9,205	1,249	**1,20,620**
6	Bidar	12,656	4,048	120	9	**4,177**
7	CH Nagar	4,527	2,091	57	3	**2,151**
8	Chikmagalur	14,057	3,421	134	8	**3,563**
9	Chikkkaballapur	4,584	3,650	149	8	**3,807**
10	Chitradurga	17,900	3,594	156	11	**3,761**
11	D.Kannada	42,441	13,287	686	79	**14,052**
12	Davangere	12,817	6,312	249	14	**6,575**
13	Dharwad	53,062	14,853	551	67	**15,471**
14	Gadag	8,232	3,572	103	2	**3,677**
15	Hassan	18,758	5,982	244	8	**6,234**
16	Haveri	9,777	4,041	174	9	**4,224**
17	Kalburgi	24,456	5,322	286	29	**5,637**
18	Kodagu	5,740	2,093	79	9	**2,181**
19	Kolar	19,959	4,699	236	19	**4,954**
20	Koppal	7,365	3,093	214	14	**3,321**
21	Mandya	15,210	5,188	189	5	**5,382**
22	Mysore	45,938	15,260	688	67	**16,015**
23	Raichur	16,081	4,696	381	36	**5,113**
24	Ramanagara	7,150	4,074	198	19	**4,291**
25	Shimoga	27,142	7,205	274	21	**7,500**
26	Tumukur	36,348	8,499	390	32	**8,921**
27	Udupi	12,882	6,573	407	40	**7,020**
28	U.Kannada	18,866	6,265	134	5	**6,404**
29	Vijapur	22,269	7,860	236	17	**8,113**
30	Yadgir	2,668	3,508	94	6	**3,608**
Total		**8,75,336**	**3,15,715**	**17,877**	**2,044**	**3,35,636**

ಪ್ರಶ್ನೆ ಸಂ 821(976): ಎಂ.ನಾರಾಯಣಸ್ವಾಮಿ, ಮಾನ್ಯ ವಿಧಾನ ಪರಿಷತ್ ಸದಸ್ಯರು **ಅನುಬಂಧ-2**

2020-21 ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಮತ್ತು ವೆಚ್ಚವಾದ ಅನುದಾನ			
☐	**ಯೋಜನೆ ಮತ್ತು ಲೆಕ್ಕ ಶೀರ್ಷಿಕೆ**	**ಬಿಡುಗಡೆಯಾಧ ಅನುದಾನ ರೂ.ಲಕ್ಷಗಳಲ್ಲಿ**	**ವೆಚ್ಚಮಾಡಲಾದ ಅನುದಾನ ರೂ.ಲಕ್ಷಗಳಲ್ಲಿ**
1	ಎಂ ಎಸ್ ಇ ಸಿ ಡಿ ಪಿ - ಕ್ಲಸ್ಟರ್ ಅಭಿವೃದ್ಧಿ ಯೋಜನೆ	849.00	308.00
2	ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ನೆರವು ಹಾಗೂ ಇತರೆ ವೆಚ್ಚಗಳು (ಕೆಎಸ್‌ಸಿಸಿಎಫ್‌ಎಲ್, ಕೆಎಸ್‌ಸಿಡಿಸಿ, ಕಿಲ್ಸ್, ಕೃಫುಡ್ಸ್, ಆಡಳಿತಾತ್ಮಕ ವೆಚ್ಚ ಮತ್ತು ತರಬೇತಿ ವಿಚಾರ ಸಂಕಿರಣ ವೆಚ್ಚ)	758.00	700.00
3	ಸಹಾಯ ಧನ-(ಕೈಗಾರಿಕಾ ನೀತಿಯಡಿ ಸಹಾಯ ಧನ ಮತ್ತು ಸಿಎಂಇಜಿಪಿ ಸಹಾಯ ಧನ)	11,404.00	11,403.95
4	ಪರಿಶಿಷ್ಟ ಜಾತಿ ಉಪ ಯೋಜನೆ-(ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ, ಪ್ರೊಸೆಸ್ಸಿಂಗ್ ಪೀಸ್, ವಿದ್ಯುಚ್ಛಕ್ತಿ ಸಹಾಯಧನ)	335.00	335.00
5	ಗಿರಿಜನ ಉಪ ಯೋಜನೆ-(ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ, ಪ್ರೊಸೆಸ್ಸಿಂಗ್ ಪೀಸ್, ವಿದ್ಯುಚ್ಛಕ್ತಿ ಸಹಾಯಧನ)	71.00	71.00
6	ಖಾದಿ ಮತ್ತು ಸಣ್ಣ ಕೈಗಾರಿಕೆ ಉತ್ಪನ್ನಗಳ ಮೇಲಿನ ರಿಯಾಯ್ತಿ (ಎಂಡಿಎ ಮತ್ತು ಪ್ರೋತ್ಸಾಹ ಮಜೂರಿ ಸಹಾಯಧನ)	10,584.00	10,584.00
7	ತೆಂಗಿನ ನಾರಿನ ವಲಯಕ್ಕೆ ನೆರವು ತೆಂಗು ಭಾಗ್ಯ (ಎಂಡಿಎ, ಅನುರೂಪ ಮಜೂರಿ ಮತ್ತು ಪ್ರೋತ್ಸಾಹ ಮಜೂರಿ ಸಹಾಯ ಧನ)	1,000.00	999.99
8	ಕರಕುಶಲ ಕಲೆಗೆ ಬೆಂಬಲ-ಕೆ ಎಸ್ ಎಚ್ ಡಿ ಸಿ - ತರಬೇತಿ, ರಿಯಾಯಿತಿ ಸಹಾಯ ಧನ	100.00	100.00
9	ಪರಿಶಿಷ್ಟ ಜಾತಿ ಉಪ ಯೋಜನೆ-50/90% ಶೆಡ್/ನಿವೇಶನ ಸಹಾಯ ಧನ	13,705.00	13,705.00
10	ಗಿರಿಜನ ಉಪ ಯೋಜನೆ-50/90% ಶೆಡ್/ನಿವೇಶನ ಸಹಾಯ ಧನ	4,118.00	4,118.00
11	ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಕೈಗಾರಿಕಾ ಮೂಲಭೂತ ಸೌಕರ್ಯಗಳು (ಮೂಲ ಸೌಕರ್ಯ ಅಭಿವೃದ್ಧಿಗೆ ಬಾಕಿ ಇರುವ ಅನುದಾನ ಬಿಡುಗಡೆ)	5,349.00	5,322.00
12	ವಿಶಿಷ್ಟ ತಾಂತ್ರಿಕ ತರಬೇತಿ ಸಂಸ್ಥೆಗಳು - ಬಂಡವಾಳ ವೆಚ್ಚ (ಕಿಲ್ಸ್, ಸಿಟಿಐ ಮತ್ತು ಅವೇಕ್ ಮುಂದುವರೆದ ಕಾಮಗಾರಿಗಳಿಗೆ ವೆಚ್ಚ)	200.00	200.00
13	ಜಿ.ಕೈ.ಕೇಂ/ಜಂ.ನಿರ ವಸತಿ ಗೃಹಗಳ ನಿರ್ಮಾಣ - ಕಟ್ಟಡಗಳು	150.00	150.00
	ಒಟ್ಟು	**48,623.00**	**47,996.94**

ಅನುಬಂಧ - 3

2019-20 ನೇ ಸಾಲಿನಿಂದ ಇಲ್ಲಿಯವರೆಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ 60% ಸಹಾಯಧನ ಬಿಡುಗಡೆ ಮಾಡಿರುವ ಜಿಲ್ಲಾವಾರು ವಿವರಗಳು

ರೂ. ಲಕ್ಷಗಳಲ್ಲಿ

#	ಜಿಲ್ಲೆ	2019-20				2020-21				2021-22			
		ವಿಘಯೋ		ಗಿಉಯೋ		ವಿಘಯೋ		ಗಿಉಯೋ		ವಿಘಯೋ		ಗಿಉಯೋ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬೆಂಗಳೂರು ನಗರ	16	67.34	-	-	-	-	-	-	-	-	-	-
2	ಬೆಂಗಳೂರು ಗ್ರಾಮಾಂತರ	3	9.69	-	-	1	3.00	-	-	1	5.00	-	-
3	ಬಾಗಲಕೋಟೆ	54	146.25	10	26.95	11	23.63	1	0.96	40	121.21	3	7.56
4	ಬೆಳಗಾವಿ	31	76.61	6	14.88	9	18.67	2	6.00	21	62.72	2	3.53
5	ಬಳ್ಳಾರಿ	2	5.4	5	16.416	2	4.80	3	5.28	6	19.10	5	19.00
6	ಬೀದರ್	3	9.32	2	3.96	5	16.72	2	3.96	5	21.00	6	22.00
7	ವಿಜಯಪುರ	-	-	-	-	1	3.00	-	-	22	62.81	-	-
8	ಚಾಮರಾಜನಗರ	2	4.8	2	4.62	4	16.25	1	1.62	4	15.30	-	-
9	ಚಿಕ್ಕಮಗಳೂರು	1	3.00	-	-	1	4.00	1	1.50	2	6.00	2	4.50
10	ಚಿಕ್ಕಬಳ್ಳಾಪುರ	5	15.00	-	-	2	5.40	1	3.00	3	15.00	-	-
11	ಚಿತ್ರದುರ್ಗ	12	37.58	-	-	2	10.00	1	5.00	-	-	-	-
12	ದಕ್ಷಿಣ ಕನ್ನಡ	2	1.2	3	4.95	1	1.20	2	1.30	-	-	2	1.30
13	ಧಾರವಾಡ	18	54.84	4	9.00	4	8.68	1	1.36	3	15.00		-
14	ದಾವಣಗೆರೆ	12	48.79	5	14.85	6	23.11	1	2.00	5	18.88	11	55.00
15	ಗದಗ	-	-	-	-	-	-	-	-	-	-	-	-
16	ಹಾಸನ	5	16.61	1	4.80	1	3.00	-	-	-	-	-	-
17	ಹಾವೇರಿ	-	0.00	2	6.00	1	3.00	1	3.51	3	11.00	1	1.49
18	ಕಲಬುರಗಿ	11	22.36	-	-	-	-	-	-	-	-	-	-
19	ಕೊಡಗು	2	2.40	1	3.60	-	-	-	-	-	-	-	-
20	ಕೋಲಾರ	5	23.00	-	-	-	-	-	-	-	-	-	-
21	ಕೊಪ್ಪಳ	13	34.95	-	-	-	-	-	-	4	10.72	3	10.00
22	ಮಂಡ್ಯ	9	42.62	-	-	7	24.96	-	-	1	3.00	-	-
23	ಮೈಸೂರು	-	-	-	-	10	34.89	-	-	-	-	-	-
24	ರಾಯಚೂರು	-	-	-	-	1	2.40	1	2.00	1	0.20	1	1.60
25	ರಾಮನಗರ	4	15.71	-	-	3	10.78	-	-	-	-	-	-
26	ಶಿವಮೊಗ್ಗ	14	51.84	1	1.80	3	10.00	2	5.00	14	53.34	-	-
27	ತುಮಕೂರು	21	66.69	3	9.33	-	-	-	-	-	-	1	4.62
28	ಉಡುಪಿ	2	7.44	-	-	-	-	-	-	-	-	-	-
29	ಉತ್ತರ ಕನ್ನಡ	-	-	-	-	2	4.00	-	-	2	5.40		-
30	ಯಾದಗಿರಿ	4	14.18	-	-	-	-	-	-	-	-	-	-
	ಒಟ್ಟು	**251**	**777.62**	**45**	**121.16**	**77.00**	**231.49**	**20**	**42.49**	**137**	**445.68**	37	130.60

2019-20ನೇ ಸಾಲಿನಿಂದ ಇಲ್ಲಿಯವರೆಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಬಿಡುಗಡೆ ಮಾಡಿರುವ ಜಿಲ್ಲಾವಾರು ವಿವರಗಳು

#	ಜಿಲ್ಲೆಯ ಹೆಸರು	2019-20				2020-21				2021-22			
		ವಿಘಯೋ		ಗಿಉಯೋ		ವಿಘಯೋ		ಗಿಉಯೋ		ವಿಘಯೋ		ಗಿಉಯೋ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬೆಂಗಳೂರು	1	25.00	-	-	4	35.74	1	29.37	1	50.75	-	-
2	ಬೆಂಗಳೂರು ಗ್ರಾಮಾಂತರ	6	186.80	5	60.87	1	18.36	-	-	-	-	-	-
3	ಬಾಗಲಕೋಟೆ	2	23.80	-	-	1	5.70	-	-	-	-	-	-
4	ಬೆಳಗಾವಿ	-	-	-	-	-	-	-	-	1	6.35	-	-
5	ಬಳ್ಳಾರಿ	3	36.00	-	-	-	-	-	-	-	-	-	-
6	ಬೀದರ್	4	31.25	4	40.75	3	13.35	1	7.75	3	42.00	1	10.00
7	ವಿಜಯಪುರ	1	75.00	-	-	4	44.00	1	10.50	-	-	-	-
8	ಚಾಮರಾಜನಗ	-	-	-	-	-	-	-	-	-	-	-	-
9	ಚಿಕ್ಕಮಗಳೂರು	-	-	-	-	-	-	-	-	-	-	-	-
10	ಚಿಕ್ಕಬಳ್ಳಾಪುರ	3	62.82	-	-	-	-	-	-	-	-	-	-
11	ಚಿತ್ರದುರ್ಗ	1	2.50	3	19.75	-	-	-	-	-	-	-	-
12	ದಕ್ಷಿಣ ಕನ್ನಡ	-	-	-	-	-	-	-	-	-	-	-	-
13	ಧಾರವಾಡ	4	90.00	1	50.00	2	17.50	1	5.50	5	62.50	1	17.00
14	ದಾವಣಗೆರೆ	2	45.75	1	10.00	2	3.03	-	-	-	-	-	-
15	ಗದಗ	1	4.25	-	-	1	10.00	-	-	-	-	-	-
16	ಹಾಸನ	-	-	-	-	-	-	-	-	-	-	-	-
17	ಹಾವೇರಿ	-	-	-	-	-	-	-	-	-	-	-	-
18	ಕಲಬುರಗಿ	-	-	-	-	-	-	-	-	3	32.50		
19	ಕೊಡಗು	-	-	1	5.30	-	-	-	-	-	-	-	-
20	ಕೋಲಾರ	10	186.50	3	38.50	2	93.75	1	18.75	-	-	-	-
21	ಕೊಪ್ಪಳ	-	-	-	-	-	-	-	-	-	-	-	-
22	ಮಂಡ್ಯ	-	-	-	-	-	-	-	-	-	-	-	-
23	ಮೈಸೂರು	2	127.60	-	-	3	25.25	1	6.42	-	-	-	-
24	ರಾಯಚೂರು	1	75.00	-	-	-	-	-	-	1	11.00		
25	ರಾಮನಗರ	5	81.65	-	-	2	30.37	-	-	-	-	-	-
26	ಶಿವಮೊಗ್ಗ	-	-	-	-	-	-	-	-	-	-	-	-
27	ತುಮಕೂರು	7	111.50	-	-	1	10.19	2	8.75	2	78.00		
28	ಉಡುಪಿ	-	-	-	-	-	-	-	-	-	-	-	-
29	ಉತ್ತರ ಕನ್ನಡ	-	-	-	-	-	-	-	-	-	-	-	-
30	ಯಾದಗಿರಿ	-	-	-	-	-	-	-	-	-	-	-	-
	ಒಟ್ಟು	53	1165.42	18.00	225.17	26	307.24	8	87.04	16	283.10	2	27.00

ಅನುಬಂಧ - 5

Annexure 5: LCQ 821(976) OF SRI M.NARAYANA SWAMY, HON'BLE MLC

KARNATAKA STATE FINANCIAL CORPORATION

Yearwise District-wise Sanctions Under Interest Subvention Loans

Amount in Rs. Lakhs

		2018-19		2019-20		2020-21	
	District	**Units**	**Sanction Amount**	**Units**	**Sanction Amount**	**Units**	**Sanction Amount**
1	BENGALURU URBAN	44	6,699.45	42	5,263.55	14	1,297.50
2	BELAGAVI	4	435.00	12	1,382.00	10	940.00
3	BALLARI	8	2,306.00	3	800.00	4	548.00
4	BIDAR	2	160.00	4	499.00	11	1,112.50
5	VIJAYAPURA	15	1,089.50	12	484.00	12	781.13
6	CHIKMAGALUR	2	265.00	4	208.00	4	197.10
7	CHITRADURGA	3	345.00	5	135.00	7	369.00
8	DAKSHINA KANNADA	4	407.00	8	266.00	6	559.00
9	DHARWAD	40	3,697.00	24	1,477.00	7	586.70
10	KALABURAGI	6	319.00	8	648.00	7	865.00
11	HASSAN	7	611.40	7	789.75	7	462.00
12	KODAGU	1	230.00	2	137.00	3	429.08
13	KOLAR	6	1,098.75	6	1,516.00	9	964.50
14	MANDYA	2	155.50	5	620.00	5	522.00
15	MYSURU	24	3,453.00	20	1,997.00	20	2,920.00
16	RAICHUR	2	315.00	2	52.50	4	284.00
17	SHIVAMOGGA	7	883.00	7	615.00	4	273.90
18	TUMAKURU	13	1,886.14	14	1,452.95	11	1,137.10
19	UTTARA KANNADA	9	529.00	10	413.00	1	50.00
20	BENGALURU RURAL	11	1,355.00	9	1,197.50	2	247.00
21	CHAMARAJANAGAR	2	100.00	4	363.50	6	451.00
22	DAVANAGERE	9	1,144.00	6	471.50	6	528.00
23	BAGALKOT	5	498.55	8	670.35	5	494.75
24	GADAG	4	144.75	9	739.40	3	218.00
25	HAVERI	3	171.20	5	138.00	6	249.40
26	UDUPI	4	304.00	3	97.50	2	185.00
27	KOPPAL	4	458.00	5	797.00	3	340.00
28	RAMANAGAR	3	801.00	10	2,108.00	6	770.00
29	CHICKBALLAPUR	5	440.56	3	546.00	2	539.00
30	YADGIR	-	-	5	401.00	2	135.00
	Total	**249**	**30,301.80**	**262**	**26,285.50**	**189**	**18,455.66**